ಕಡೆ ಔಷಧಕ್ಕೆ ಬೇಕಾಗುವ ಹಣವನ್ನು ರೈತರಿಂದಲೇ ಕಂದಾಯದ ರೂಪದಲ್ಲಿ ವಸೂಲು ಮಾಡುತ್ತೇವೆ, ಕೊಡದಿದ್ದರೆ ಮೂರು ತಿಂಗಳ ಶಿಕ್ಷೆಕೊಡಿಸುತ್ತೇವೆಂದು ಈ ಬಿಲ್ಲಿನಲ್ಲಿ ಹೇಳಿರುವುದು ಯಾವ ನ್ಯಾಯ ? ರೈತರ ವಿಷಯದಲ್ಲಿ ನಿಮಗೆ ಸಾಕಷ್ಟು ಅನುಭವವಿದೆಯೇ ಎಂದು ಕೇಳುತ್ತೇನೆ. ಈ ಬಿಲ್ಲನ್ನು ಯಾರು ಬರೆದವರು ; ಕಾನೂನನ್ನು ತಿಳಿಯದವರು ಬರೆದಿರಬೇಕೆಂದು ಕಾಣುತ್ತದೆ. ರೈತರು ಬತ್ತನೆ ಮಾಡುವ ಕಾಲಕ್ಕೆ ಸರ್ಕಾರದವರು ಮುಂದು ಬಂದು ಸಹಾಯ ಮಾಡಬೇಕು. ಪಾಶ್ಚಾತ್ಯದೇಶಗಳ ರೀತಿಯಲ್ಲಿ ರೈತರಿಗೆ ಅನುಕೂಲ ಮಾಡುತ್ತೇವೆಂದು ಹೇಳುತ್ತೀರಿ, ಆದರೆ ಮಾಡುತ್ತಿಲ್ಲ. ಬೇರೆ ದೇಶಗಳಲ್ಲಿ ಬೆಳೆಗಳಿಗೆ ರೋಗ ಬಂದರೆ ಹೆಲಿಕ್ಯಾಪ್ಟರ್ ಮೂಲಕ ಔಷಧಗಳನ್ನು ಚೆಲ್ಲುತ್ತಾರೆ. ಅದಕ್ಕೆ ರೈತರಿಂದ ಯಾವ ಹಣ ವಸೂಲು ಮಾಡುವುದಿಲ್ಲ. ಆದರೆ ಇಲ್ಲಿ ಪ್ರತಿಯೊಂದಕ್ಕೂ ರೈತನೇ ಕೊಡಬೇಕು, ಕೊಡದಿದ್ದರೆ ದಂಡ ವಸೂಲು ಮಾಡುತ್ತೇವೆಂದು ಈ ಒಂದು ಕಾಲಮ್‌ನಲ್ಲಿ ಹೇಳಿದ್ದೀರಿ. ಇದರಿಂದ ಉಪಕಾರಕ್ಕಿಂತ ಅಪಕಾರವೇ ಜಾಸ್ತಿಯಾಗುತ್ತದೆ. ಕ್ರಿಮಿಕೀಟಗಳನ್ನು ನಾಶ ಮಾಡುವುದಕ್ಕೆ ಆಗುವ ಖರ್ಚನ್ನು ಬೇರೆ ಬಾಬುಗಳಿಂದ ಒದಗಿಸಬೇಕು. ನಮ್ಮ ದೇಶದಲ್ಲಿ ಆಹಾರದ ಕೊರತೆಯಿರುವುದು ಕೇವಲ 4—5 ಲಕ್ಷ ಟನ್ ಮಾತ್ರ. ಈ 4—5 ಲಕ್ಷ ಟನ್ ಆಹಾರಕ್ಕಾಗಿ ಹೊರದೇಶಗಳಿಗೆ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗುತ್ತಿದ್ದೀರಿ. 4—5 ಲಕ್ಷ ಟನ್ ಆಹಾರವನ್ನು ಹೊರಗಿನಿಂದ ತರಿಸಿಕೊಳ್ಳುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅದೇ ದುಡ್ಡನ್ನು ಕ್ರಿಮಿಕೀಟಗಳ ನಾಶಕ್ಕೆ ಉಪಯೋಗಿಸಿದರೆ, ಅದೇ 4—5 ಲಕ್ಷ ಟನ್ ಆಹಾರವನ್ನು ನಮ್ಮ ರಾಜ್ಯದಲ್ಲೇ ಉಳಿಸಬಹುದಾಗಿದೆ. 12 ಪರ್‌ಸೆಂಟ್ ಆಹಾರಧಾನ್ಯ ಕ್ರಿಮಿಕೀಟಗಳಿಂದ ನಾಶವಾಗುತ್ತಿದೆಯೆಂದು ಹೇಳುತ್ತಿದ್ದೀರಿ. ಈ ಕ್ರಿಮಿಕೀಟಗಳಿಂದ ಆಗುವ ಲುಕ್ಸಾನನ್ನು ತಪ್ಪಿಸಿದರೆ ಆ 4—5 ಲಕ್ಷ ಟನ್ ಆಹಾರವನ್ನು ಉಳಿಸಬಹುದಾಗಿದೆ. ಆಹಾರವನ್ನು ಹೊರದೇಶಗಳಿಂದ ತರಿಸಿಕೊಳ್ಳಲು ಒಂದು ಬಾಬಿನಿಂದ ಹಣವನ್ನು ಕೊಡುತ್ತಿದ್ದೀರಿ. ಅದೇ ಹಣವನ್ನು ಕ್ರಿಮಿಕೀಟಗಳನ್ನು ನಾಶ ಮಾಡುವ ಔಷಧಕ್ಕಾಗಿ ಉಪಯೋಗಿಸಿದರೆ ಕೊರತೆ ಇರುವ ಆಹಾರವನ್ನು ಇಲ್ಲಿಯೇ ಉತ್ಪಾದನೆ ಮಾಡಿಕೊಳ್ಳಬಹುದು. ಸರ್ಕಾರದವರು ದುಡ್ಡು ಖರ್ಚುಮಾಡಿದರೆ ಅದನ್ನು ರೈತರೇ ಕೊಡಬೇಕೆಂದು ಶ್ರೀ ಕೊಠಾವಳೆಯವರು ಹೇಳುವುದು ಸರಿಯಲ್ಲ. ಇದಕ್ಕಾಗಿ ಆಗುವ ಖರ್ಚನ್ನು ನೇರವಾಗಿ ರೈತರ ಮೇಲೆ ಹಾಕುತ್ತೇವೆಂದು ಹೇಳಿರುವ ಕಾಲವನ್ನು ತೆಗೆದುಹಾಕಬೇಕು. ಮತ್ತು ಹಣ ಕೊಡದಿದ್ದರೆ ಕ್ರೂರವಾದ ಶಿಕ್ಷೆಯನ್ನು ವಿಧಿಸುತ್ತೇವೆಂದು ಹೇಳಿರುವ ಕಾಲವನ್ನು ಸಹ ಕತ್ತುಹಾಕಬೇಕು. ಬೆಳೆಗಳಿಗೆ ಆಗಿರುವ ರೋಗಗಳನ್ನು ತಪ್ಪಿಸಲು ಔಷಧವನ್ನು ಹಾಕುತ್ತೇವೆಂದು ಸರ್ಕಾರದವರು ಮುಂದೆ ಬಂದರೆ ಸಂಬಂಧಪಟ್ಟ ರೈತರು ಸಹ ನಿಮ್ಮ ನೆರವಿಗೆ ಬಂದು ಸಹಾಯ ಮಾಡುತ್ತಾರೆ. ತನ್ನ ಹೊಲ ಗದ್ದೆಗಳಲ್ಲಿರುವ ಬೆಳೆಗಳಿಗೆ ಬಂದಿರುವ ರೋಗಗಳನ್ನು ತಪ್ಪಿಸಲು ಔಷಧ ಹಾಕುತ್ತೇವೆಂದು ಸರ್ಕಾರದ ಸಿಬ್ಬಂದಿಗಳು ಹೋದರೆ ಆ ರೈತನು ಸಂತೋಷದಿಂದ ಒಪ್ಪುತ್ತಾನೆ. ಅವನು ಸಹಾಯ ಮಾಡದಿದ್ದರೆ, ಅದಕ್ಕೆ ಬೇಕಾಗುವ ಹಣವನ್ನು ಕೊಡದಿದ್ದರೆ ಜುಲ್ಮಾನೆ ಹಾಕುತ್ತೇವೆಂದು ಹೇಳಿರುವ ಕಾಲಮನ್ನು ತೆಗೆದುಹಾಕಬೇಕು. ಕಾನೂನು ಮಾಡಿ ರೈತರಿಂದ ಹಣ ವಸೂಲು ಮಾಡುತ್ತೇವೆಂದು ಹೇಳುವುದು ತಪ್ಪಾಗುತ್ತದೆ.

ಪಾನನಿರೋಧವನ್ನು ದೇಶದಲ್ಲಿ ಕಾನೂನು ಮಾಡಿ ಜಾರಿಗೆ ತರುವುದಕ್ಕಾಗಲಲ್ಲ. ಯಾವ ಕೆಲಸವೂ ಸ್ವಯಂಪ್ರೇರಣೆಯಿಂದ ಆಗಬೇಕಲ್ಲದೆ ಕಾನೂನಿನಿಂದ ಮಾಡಿಸುತ್ತೇವೆಂದು ಹೇಳುವುದು ಸರಿಯಲ್ಲ. ಆ ರೀತಿ ಕಾನೂನಿನಿಂದಲೇ ಜಾರಿಗೆ ತರುತ್ತೇವೆಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ಅದು ತೊಲಗಿಹೋಗಬೇಕು. ಒಳ್ಳೆಯ ಕೆಲಸಗಳನ್ನು ಇಂಥ ಕಾನೂನನ್ನು ತಂದು ಮಾಡುವುದಕ್ಕಾಗುವುದಿಲ್ಲ. ಯಾವ ವರ್ಗಕ್ಕೆ ಇದರಿಂದ ಅನುಕೂಲವಾಗುತ್ತದೋ ಅವರು ತಮ್ಮಲ್ಲಿಯೇ ತಿಳಿದು ಕೊಂಡು ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಸಹಾಯ ಮಾಡುತ್ತಾರೆ. ಕಾನೂನು ಹಿಡಿತದಿಂದ ರೈತರನ್ನು ಬಂಧಿಸಿ ಕೆಲಸ ಮಾಡಿಸುತ್ತೇವೆ, ಅವರು ಒಪ್ಪದಿದ್ದರೆ ಶಿಕ್ಷೆಗೆ ಒಳಪಡಿಸಿ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಹೇಳುವ ನಿಮ್ಮ ಕಾನೂನಿನ ದೃಷ್ಟಿಕೋನ ಎಂಬುದು ಕೆಟ್ಟ ದೃಷ್ಟಿಕೋನವಾಗಿದೆ. ಅದು ಮಾಯವಾಗಬೇಕು. ಇದೇ ರೀತಿ ಅನೇಕ ಕೆಟ್ಟ ಕೆಟ್ಟ ಕಾನೂನುಗಳನ್ನು ತರುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಈಗ ತಂದಿರುವ ಕಾನೂನನ್ನು ವಾಪಸ್ ತೆಗೆದುಕೊಂಡು, ರೈತರಿಗೆ ಯಶಸ್ಸಿಯಾಗುವ ರೀತಿಯಲ್ಲಿ ವ್ಯವಸಾಯ ಇಲಾಖೆಯವರಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹಾಕಬೇಕಾಗಿದೆ. ವ್ಯವಸಾಯ ಇಲಾಖೆಯವರ ಜವಾಬ್ದಾರಿಯನ್ನು ರೈತನ ಮೇಲೆ ಹಾಕಿ ಸರ್ಕಾರದವರು ತಮ್ಮ ಒಂದು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬೇಕೆಂದಿರುವಂತೆ ಕಾಣುತ್ತಿದೆ. ಈಗ ತಂದಿರುವ ಕಾನೂನನ್ನು ವಾಪಸ್ ತೆಗೆದುಕೊಂಡು ರೈತರಿಗೆ ಅನುಕೂಲವಾಗುವ ರೀತಿ ಕಾನೂನು ಮಾಡಿ ಆ ಮೂಲಕ ಒಳ್ಳೆಯ ಕೆಲಸಗಳನ್ನು ಮಾಡಿದರೆ ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ಆಹಾರದ ತೊಂದರೆ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ಈ ಮಸೂದೆಯನ್ನು ವಿರೋಧ ಮಾಡುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದಲ್ಲಿ ರೈತರು ಬೆಳೆಯುವ ಬೆಳೆಗಳಿಗೆ ಬಂದು ಕಾಡುವ ಕ್ರಿಮಿಕೀಟಗಳನ್ನು ನಾಶಮಾಡುವುದಕ್ಕಾಗಿ ಈ ಒಂದು ಬಿಲ್ಲನ್ನು ತಂದಿದ್ದಾರೆ. ರೈತರು ಬಿತ್ತನೆಗಳನ್ನು ಬಿತ್ತಿ ಫಸಲು ಪೂರ್ತಿಯಾಗಿ ಬರುವವರೆಗೂ ಒಂದರಲ್ಲಾ ಒಂದು ರೀತಿ ಕ್ರಿಮಿಕೀಟಗಳ ಕಾಟವಿರುತ್ತದೆ. ಬೀಜ ಬಿತ್ತಿದಾಗ ಇಲಗಳ ಕಾಟವಿರುತ್ತದೆ. ಬೀಜಗಳು ಒಡೆದು ಸ್ವಲ್ಪ ಬೆಳೆದಾಗ ಮಿಡತೆಗಳ ಕಾಟವಿರುತ್ತದೆ. ಸ್ವಲ್ಪ ಎತ್ತರವಾಗಿ ಬೆಳೆದಾಗ ಕುರಿಹುಳ ಮತ್ತು ಬೆಂಕಿ ಹುಳುಗಳ ಕಾಟವಿರುತ್ತದೆ. ಕೆಲವು ಕಡೆ ಕೋತಿಗಳ ಕಾಟವೂ ಇರುತ್ತದೆ. ಈ ಪ್ರಕಾರ ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ನಾವು ತಿಳಿದಂತೆ 20 ಪರ್‌ಸೆಂಟ್ ಬೆಳೆ ನಾಶವಾಗುತ್ತಿದೆ. ನಾನು ತಿಳಿದಮಟ್ಟಿಗೆ ಈ ಬೆಳೆಗಳಿಗೆ ಬರುವ ರೋಗಗಳನ್ನು ನಿವಾರಣೆ ಮಾಡುವುದಕ್ಕೆ, ಬೇಕಾಗತಕ್ಕಂಥ ಔಷಧಗಳು ಸಿಕ್ಕದೆ ರೈತರು ತೊಂದರೆ ಪಡುತ್ತಿದ್ದ ಕಾಲವಿತ್ತು. ಒಂದು ತೊಂದರೆಯನ್ನು ಈಗ ನಾವು ಕಾಣುತ್ತಿದ್ದೇವೆ. ಈಗ 5 ರೀತಿಯ ಕಾನೂನುಗಳಿವೆ. Mysore Destructive Insects and Pests Act, 1917ರ ಪ್ರಕಾರ ನಮಗೆ ಹೆಚ್ಚು ನವಲತ್ತು ಸಿಗುತ್ತಿತ್ತು. ನಾವು ಬೊಂಬಾಯಿ ಕರ್ನಾಟಕದಲ್ಲಿದ್ದಾಗ Bombay Agricultural Pests and Diseases Act, 1947ರ ಪ್ರಕಾರ ಸಾಕಷ್ಟು ಸಹಾಯ ಸಿಗದೆ ತೊಂದರೆಯಾಗುತ್ತಿತ್ತು. ಈಗ ಬೇರೆ ಬೇರೆ ಕಾನೂನುಗಳು ಇರುವುದರಿಂದ ಸಾಮಾನ್ಯವಾಗಿ ರಾಜ್ಯದಾದ್ಯಂತ ಇರುವ ರೈತರಿಗೆ ಅನಾನುಕೂಲ ಹೆಚ್ಚಾಗಿ, ಅವುಗಳನ್ನು ಸರಿಪಡಿಸುವುದಕ್ಕೆ ಈ ಎಲ್ಲಾ ಕಾನೂನುಗಳನ್ನು ಕ್ರೋಢೀಕರಿಸಿ Mysore Agricultural Pests and Diseases Bill, 1967, ಎಂದು ಹೊಸದಾಗಿ ಒಂದು ಬಿಲ್ಲನ್ನು ತಂದು ಹಿಂದೆ ಮುಂಬಾಯಿ ಕರ್ನಾಟಕದಲ್ಲಿ ಇದ್ದು ಈಗ ಮೈಸೂರು ಕರ್ನಾಟಕಕ್ಕೆ ಸೇರಿರುವ ರೈತರಿಗೂ ಅನುಕೂಲವಾಗುವಂತೆ ಮಾಡಿದ್ದಾರೆ. ರಾಜ್ಯದಲ್ಲಿರುವ ಎಲ್ಲ ರೈತರಿಗೆ ಒಳ್ಳೆಯ ಬೆಳೆ ತೆಗೆಯುವುದಕ್ಕೆ ಅನುಕೂಲವಾಗುವಂತೆ ಬೆಳೆಗಳಿಗೆ ಬರುವ ರೋಗಗಳನ್ನು ನಾಶಮಾಡುವುದಕ್ಕೆ ಮತ್ತು ಕ್ರೀಮಿಕೀಟಗಳಿಂದ ಹಾಳಾಗುವುದನ್ನು ತಪ್ಪಿಸುವುದಕ್ಕೆ ಎಂಬುದಾಗಿ ಒಂದು ಸದುದ್ದೇಶದಿಂದ ಈ ಬಿಲ್ಲನ್ನು ತಂದಿರುವುದು ಒಂದು ಸಂತೋಷದ ಸಂಗತಿ. ಈ ಬಗ್ಗೆ ಒಂದೆರಡು ಸಲಹೆಗಳನ್ನು ಮಾಡುತ್ತೇನೆ.

5-00 P.M.

ನಾನು ಒಂದೆರಡು ಸಲಹೆಗಳನ್ನು ಮಾಡುತ್ತೇನೆ. ಈಗಾಗಲೇ ಮಾತನಾಡಿದ ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಈ ಕಾನೂನು ಅನುಸರಿಸಿ ನೋಟೀಸ್ ಕೊಡತಕ್ಕಂಥಾದ್ದು, ನೋಟೀಸಿಕ್ಕೆ ಅಪೀಲು ಮಾಡುವುದು, ಅದಕ್ಕೆ ಶಿಕ್ಷೆ ಮಾಡುವುದು ಇವು ಇದರಲ್ಲಿ ಇವೆ. ನಮ್ಮ ರಾಜ್ಯದಲ್ಲಿ ಈಗ ಇರತಕ್ಕಂಥ ಬೆಳೆಗಳ ರೋಗ ನಿವಾರಣೆಗೆ ಸಾಕಷ್ಟು ಔಷಧಿ ಇದೆಯೇ ? ಆ ಔಷಧ ರಾಜ್ಯದಲ್ಲಿ ತಯಾರಾಗುತ್ತದೆಯೇ ? ಯಾವ ಔಷಧ ಕಾರ್ಖಾನೆಯಿಂದ ತರಿಸಿ ಒದಗಿಸುತ್ತಿದ್ದೀರಿ ? ಪರದೇಶದಿಂದ ಪರ ಪ್ರಾಂತದಿಂದ ಔಷಧಿ ತರಿಸಿದರೆ ಅದಕ್ಕೆ ಹೆಚ್ಚು ಖರ್ಚು ಬರುತ್ತದೆ. ಅಲ್ಲದೆ ತೊಂದರೆಯಾಗುತ್ತದೆ. ನಮ್ಮ ಭಾಗದಲ್ಲಿ ಬೆಳ್ಳಟ್ಟಿ ಎಂಬ ಗ್ರಾಮದಲ್ಲಿ ಶೇಂಗಾ ಬಿತ್ತನೆಯಾಗಿದೆ, ಕಾಳುಗಳಿಗೆ ರನ ತುಂಬುವುದಕ್ಕೆ ಬಂದಾಗ್ಗೆ ಕೋರಿಹುಳ ಬಿದ್ದಿದೆ ಎಂದು ನನಗೆ ಬಂದಿರುವ ಪತ್ರದ ಮುಖಾಂತರ ತಿಳಿದಿದೆ. ಈ ಹುಳಗಳು ನಾಟಿ ತಿನ್ನುವುದಲ್ಲದೆ ಜನರಿಗೆ ಸಹ ತೊಂದರೆ ಕೊಡುತ್ತವೆ. ವ್ಯವಸಾಯ ಇಲಾಖೆಯವರು ಔಷಧಿ ಚಿಮುಕಿಸುತ್ತಿದ್ದಾರೆ. ಆದರೆ ಔಷಧ ಚಿಮುಕಿಸಿದ ಹಾಗೆ ಕ್ರಿಮಿಗಳು ಹೆಚ್ಚು ಬೆಳೆಯುತ್ತವೆ ಎಂಬುದು ಕಂಡು ಬಂದಿದೆ. ಈ ರೀತಿಯಾಗುತ್ತಿದೆ ಎಂದು ಒಬ್ಬ ರೈತನು ನನಗೆ ಕಾಗದ ಬರೆದಿದ್ದಾನೆ. ಇಂಥ ಪ್ರಸಂಗದಲ್ಲಿ ಹೆಚ್ಚಾಗಿ ಮಳೆ ಬಂದರೆ ಕೀಟಕಗಳು ನಾಶವಾಗುತ್ತವೆ. ಆದರೆ ಮಳೆ ಇಲ್ಲದೇ ಇರುವುದರಿಂದ ಈ ಕ್ರಿಮಿಕೀಟಕಗಳು ಅತಿಯಾಗಿ ಉದ್ಭವಿಸುತ್ತವೆ. ಇದರ ನಿವಾರಣೆಗೆ ತೀವ್ರ ಕ್ರಮ ತೆಗೆದುಕೊಂಡರೆ ನಾಶ ಮಾಡುವುದು ಸಾಧ್ಯವಾಗುತ್ತದೆ. ಶ್ರೀಮಾನ್ ನಾಗನಗೌಡರು ಈ ವ್ಯವಸಾಯ ಇಲಾಖಾ ಪ್ರೋರ್ಫೆಸರ್ ಪೋಲಿಯೋ ತೆಗೆದುಕೊಂಡಾಗ್ಗೆ ಇದನ್ನು ಮಾಡಿ ತೋರಿಸಿದ್ದಾರೆ. ಈ ಕೀಟಕಗಳು ಶಕ್ತಿಮಾನ್ ಬೀಜದ ಜೋಳ ರಾಗಿ ಬೆಳೆಗೆ ಬರುತ್ತವೆ. ಪೀಕು ನಾಶ ಮಾಡುತ್ತವೆ. ಇದಕ್ಕಾಗಿ ರೈತನು ಖರ್ಚು ಮಾಡಬೇಕಾಗುತ್ತದೆ ಇದರಲ್ಲ ನರಕಾರದ ಪಾಲು ಏನೂ ಇಲ್ಲ. ಇದರ ಖರ್ಚನ್ನು ರ್ಯಾಂಡ್ ರೆವೆನ್ಯೂ ಜೊತೆಗೆ ವಸೂಲಾಗುತ್ತಾರೆ. ರೈತ ಚೆನ್ನಾಗಿ ಬೆಳೆಯದೇ ಇರುವುದರಿಂದ ಆಹಾರ ಅಭಾವ ಕಂಡುಬರುತ್ತದೆ. ಈ ಹುಳ ಬರದೇ ಇದ್ದರೆ ಹೆಚ್ಚು ಬೆಳೆ ಬರುತ್ತದೆ. ಈ ರೋಗ ಬಂದಿತು ಅಂದರೆ ತೆನೆಗಳಿಗೆ ದೊಡ್ಡ ಕಣ್ಣಿನ ಬೆಂಕಿ ಹುಳ ಹತ್ತಿ ಕಾಳಿನಲ್ಲಿಯ ರಸ ಹೀರಿ ಜೊಳ್ಳು ಮಾಡಿ ಬಿಡುತ್ತವೆ. ತೆನೆಗಳ ಮೇಲೆ ಈ ಔಷಧ ಹೊಡೆಯುವುದರಿಂದ ಆ ಧಾನ್ಯವನ್ನು ಮನುಷ್ಯ ತಿಂದು ಸಾಯತಕ್ಕ ಪರಿಸ್ಥಿತಿ ಬರುತ್ತದೆ. ಈ ಔಷಧ ಹೊಡೆಯುವುದಕ್ಕೆ ಸಹಾಯ ಮಾಡಲು 18 ವರ್ಷಕ್ಕೆ